# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 385 |
| ಉತ್ತರಿಸಬೇಕಾದ ದಿನಾಂಕ | 03.02.2021 |
| ಉತ್ತರಿಸುವ ಸಚಿವರು | ವಸತಿ ಸಚಿವರು |

| ಅನು ಕ್ರಮ | ಪ್ರಶ್ನೆ | ಉತ್ತರ |
|---|---|---|
| ಅ | "ಪ್ರತಿಯೊಬ್ಬರಿಗೂ ಸೂರು" ಎಂಬ ಕಾರ್ಯಕ್ರಮ ರಾಜ್ಯದಲ್ಲಿ ಜಾರಿಯಲ್ಲಿದೆಯೇ; ಬಡವರಿಗೆ ಸೂರು ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳಾವುವು; | "Housing For All - 2022" "ಸರ್ವರಿಗೂ ಸೂರು" ಎಂಬ ಅಭಿಯಾನವು ನಗರಗಳ ಬಡಜನರಿಗೆ ವಸತಿ ಕಲ್ಪಿಸುವ ಕಾರ್ಯಕ್ರಮವಾಗಿದ್ದು, ಇದು ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಭಾಗವಾಗಿರುತ್ತದೆ.<br><br>ಸದರಿ ಕಾರ್ಯಕ್ರಮದಡಿ ರಾಜ್ಯದಲ್ಲಿ ಈವರೆಗೆ 5,82,728 ಮನೆಗಳನ್ನು ನಿರ್ಮಿಸಲು ಕೇಂದ್ರ ಸರ್ಕಾರದಿಂದ ಅನುಮೋದನೆ ನೀಡಲಾಗಿರುವ ಮೇರೆಗೆ, ಸದರಿ ಯೋಜನೆಯಡಿಯ ಕಾರ್ಯಕ್ರಮವನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. |
| ಆ | ಇದುವರೆಗೂ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಈ ಯೋಜನೆಯಲ್ಲಿ ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿದೆ; ಅದರಲ್ಲಿ ಎಷ್ಟು ಫಲಾನುಭವಿಗಳಿಗೆ ವಸತಿ ಹಂಚಿಕೆ ಮಾಡಲಾಗಿದೆ; | ಹೌಸಿಂಗ್ ಫಾರ್ ಆಲ್ ನಗರ ಯೋಜನೆಯಡಿ 2016-17 ರಿಂದ 2018-19ನೇ ಸಾಲಿನವರೆಗೆ ನಡೆಸಿದ ಬೇಡಿಕೆ ಸಮೀಕ್ಷೆಯ ಪ್ರಕಾರ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಒಟ್ಟು 98,415 ವಸತಿರಹಿತ ಮತ್ತು ನಿವೇಶನರಹಿತ ಫಲಾನುಭವಿಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ ಮತ್ತು ಈ ಫಲಾನುಭವಿಗಳ ಪೈಕಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಫಲಾನುಭವಿಗಳಿಗೆ ಅನುಕ್ರಮವಾಗಿ 32,071 ಮತ್ತು 5,396 ಮನೆಗಳನ್ನು ಒದಗಿಸಲು ಕೇಂದ್ರ ಸರ್ಕಾರದಿಂದ ಅನುಮೋದನೆ ನೀಡಲಾಗಿದೆ:- |

| ಜಿಲ್ಲೆಯ ಹೆಸರು | ಸ್ಥಳೀಯ ಸಂಸ್ಥೆಗಳ ಹೆಸರು | ನಿವೇಶನ / ವಸತಿ ರಹಿತರ ಸಂಖ್ಯೆ | ಕೇಂದ್ರ ಸರ್ಕಾರದಿಂದ ಅನುಮೋದನೆಯಾಗಿರುವ ಮನೆಗಳ ಸಂಖ್ಯೆ |
|---|---|---|---|
| ಮೈಸೂರು | ಬನ್ನೂರು | 2467 | 1143 |
| | ಹೆಚ್.ಡಿ. ಕೋಟೆ | 1650 | 1869 |
| | ಹುಣಸೂರು | 4942 | 2068 |
| | ಕೆ.ಆರ್. ನಗರ | 3671 | 2067 |
| | ಮೈಸೂರು | 61234 | 20708 |
| | ನಂಜನಗೂಡು | 4495 | 1340 |
| | ಪಿರಿಯಾಪಟ್ಟಣ | 862 | 554 |
| | ಸರಗೂರು | 1262 | 1093 |
| | ಟಿ. ನರಸೀಪುರ | 2032 | 1229 |
| **ಒಟ್ಟು:** | | **82,615** | **32,071** |
| ಚಾಮರಾಜನಗರ | ಚಾಮರಾಜನಗರ | 5462 | 2293 |
| | ಗುಂಡ್ಲುಪೇಟೆ | 2915 | 608 |
| | ಹನೂರು | 1495 | 424 |
| | ಕೊಳ್ಳೇಗಾಲ | 4214 | 1640 |
| | ಯಳಂದೂರು | 1714 | 431 |
| **ಒಟ್ಟು:** | | **15,800** | **5,396** |
| **ಎರಡೂ ಜಿಲ್ಲೆಗಳಿಂದ ಒಟ್ಟು:** | | **98,415** | **37,467** |

| | | |
|---|---|---|
| ಇ | ಬಡವರಿಗೆ ವಸತಿ ಹಂಚಿಕೆ ಮಾಡಲು ಚಾಲ್ತಿಯಲ್ಲಿರುವ ಇತರೆ ಯೋಜನೆಗಳು ಯಾವುವು? (ವಿವರ ನೀಡುವುದು) | ನಗರ ಪ್ರದೇಶದ ಬಡವರಿಗೆ ವಸತಿ ಕಲ್ಪಿಸಲು ಚಾಲ್ತಿಯಲ್ಲಿರುವ ಇತರೆ ಯೋಜನೆಗಳು ಈ ಕೆಳಗಿನಂತಿವೆ:-<br><br>1. ವಾಜಪೇಯಿ ನಗರ ವಸತಿ ಯೋಜನೆ<br>2. ಡಾ: ಬಿ. ಆರ್. ಅಂಬೇಡ್ಕರ್ ನಿವಾಸ್ ಯೋಜನೆ-ನಗರ<br>3. ದೇವರಾಜ ಅರಸು ವಸತಿ ಯೋಜನೆ<br>4. ಮುಖ್ಯ ಮಂತ್ರಿಯವರ "ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ". |

[ಸಂಖ್ಯೆ: ವಇ 26 ಹೆಚ್‌ಎಫ್‌ಎ 2021]

(ವಿ. ಸೋಮಣ್ಣ)
ವಸತಿ ಸಚಿವರು.